Ray (ರೇ) ಯೋಜನೆ

1460(2408); ಶ್ರೀ ಕೃಷ್ಣಾ ರೆಡ್ಡಿ ಎಂ. (ಚಿಂತಾಮಣಿ)

ಅ) ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರದಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ರೇ–ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಮನೆಗಳನ್ನು ನಿರ್ಮಿಸಲು ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಮನೆಗಳನ್ನು ನಿರ್ಮಿಸಲು ಕೈಗೊಂಡ ಕ್ರಮಗಳೇನು (ವಿವರ ನೀಡುವುದು)

ಇ) ಯಾವ ಕಾಲಮಿತಿಯೊಳಗೆ ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು (ವಿವರ ನೀಡುವುದು);

ಈ) ಸದರಿ ಯೋಜನೆಯಡಿ ಅನುಮೋದನೆಯಾಗಿರುವ ಮನೆಗಳನ್ನು ನಿರ್ಮಿಸಲು ನೀಡಿರುವ ಗುತ್ತಿಗೆದಾರರ ವಿವರ ಮತ್ತು ಗುತ್ತಿಗೆ ಮೊತ್ತದ ವಿವರ ನೀಡುವುದು; ವೆಚ್ಚ ಮಾಡುತ್ತಿರುವ ಮೊತ್ತವೆಷ್ಟು; (ಗುತ್ತಿಗೆದಾರರ ಪೂರ್ಣ ವಿವರದೊಂದಿಗೆ ಮಾಹಿತಿ ನೀಡುವುದು)?

ಡಾ॥ ಎಂ.ಹೆಚ್. ಅಂಬರೀಷ್ (ಮಾನ್ಯ ವಸತಿ ಸಚಿವರು)

ಅ) ಕೇಂದ್ರ ಸರ್ಕಾರದ ರಾಜೀವ್ ಅವಾಸ್ ಯೋಜನೆಯಡಿ ಚಿಂತಾಮಣಿ ನಗರದ 2 ಕೊಳಚೆ ಪ್ರದೇಶಗಳಲ್ಲಿ 1) ಹೈದರಾಲಿ ನಗರ/ನಲ್ಲಗುಂಟ–120 ಮನೆ, 2) ಜಗಜೀವನರಾಮ್ ನಗರ–110 ಮನೆ ಒಟ್ಟು 230 ಮನೆಗಳ ನಿರ್ಮಾಣವನ್ನು ಮೂಲಭೂತ ಸೌಲಭ್ಯಗಳೊಂದಿಗೆ ಕೈಗೊಳ್ಳಲು ರೂ. 1002.80 ಲಕ್ಷಗಳಿಗೆ ಮಂಜೂರಾತಿ ದೊರೆತ್ತಿದೆ. ಸದರಿ ಕಾಮಗಾರಿಗೆ ದಿನಾಂಕ: 16–9–2014 ರಂದು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರಿನಲ್ಲಿ ಭಾಗವಹಿಸಿದ್ದ ಏಕೈಕ ಟೆಂಡರನ್ನು ದಿನಾಂಕ: 12–1–2015 ರಂದು ಎಸ್.ಎಲ್.ಇ.ಸಿ. ಸಭೆಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.

ಆ) ಎಸ್.ಎಲ್.ಇ.ಸಿ. ಸಭೆಯ ಅನುಮೋದನೆಯಂತೆ ಗುತ್ತಿಗೆದಾರರಾದ ಶ್ರೀ ಜಿ. ಚಂದ್ರೇಗೌಡ ರವರಿಗೆ ಗುತ್ತಿಗೆ ಕರಾರು ಮಾಡಿಕೊಳ್ಳುವ LOA ನ್ನು ದಿನಾಂಕ: 12–2–2015 ರಂದು ನೀಡಿದ್ದು ಗುತ್ತಿಗೆದಾರರು ಅನುಮೋದನೆ ನೀಡಿರುವ ಶೇ. 5 ರಷ್ಟು ಅಧಿಕ ದರದಲ್ಲಿ ಕಾಮಾರಿಯನ್ನು ನಿರ್ವಹಿಸಲು ಸಾಧ್ಯವಿಲ್ಲವೆಂದು ತಿಳಿಸಿ ಶೇ. 12 ರಷ್ಟು ಅಧಿಕ ದರ ನೀಡಿದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿರುವ ಹಿನ್ನಲೆಯಲ್ಲಿ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪ್ರಸ್ತುತ ಅನುಮೋದನೆಗೊಂಡಿರುವ 42 ಯೋಜನೆಗಳ ಪೈಕಿ 20 ಯೋಜನೆಗಳನ್ನು (22133 ಮನೆಗಳು) ಈಗಾಗಲೇ ಪ್ರಾರಂಭಿಸಿದ್ದು, ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. ಸದರಿ 20 ಯೋಜನೆಗಳ ಯೋಜನಾ ಮೊತ್ತವು ರೂ. 1129.26 ಕೋಟಿಗಳಾಗಿದ್ದು, ಈ ಪೈಕಿ ರೂ. 620.06 ಕೋಟಿಗಳು ಕೇಂದ್ರ ಸರ್ಕಾರದ ಪಾಲಾಗಿರುತ್ತದೆ. ಉಳಿದ ರೂ. 509.20 ಕೋಟಿಗಳು ರಾಜ್ಯ ಸರ್ಕಾರದ ಪಾಲಾಗಿರುತ್ತದೆ. ದಿನಾಂಕ: 19–05–2015ರ ಕೇಂದ್ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿ ಪ್ರಾರಂಭಿಸಲಾಗಿರುವ 20 ಯೋಜನೆಗಳಿಗೆ ಮಾತ್ರ ಕೇಂದ್ರ ಸರ್ಕಾರದ ಅನುದಾನ ರೂ. 620.06 ಕೋಟಿಗಳನ್ನು ಮಾತ್ರ ನೀಡಲಾಗುವುದು ಹಾಗೂ ಪ್ರಾರಂಭಿಸದೇ ಇರುವ 22 ಯೋಜನೆಗಳಿಗೆ (14,925 ಮನೆಗಳಿಗೆ) ಕೇಂದ್ರ ಸರ್ಕಾರದ ಅನುದಾನ ರೂ. 418.01 ಕೋಟಿಗಳನ್ನು ನೀಡಲಾಗುವುದಿಲ್ಲವೆಂದು ತಿಳಿಸಿ, ಸದರಿ 22 ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದ ಮೊದಲನೇ ಕಂತಿನ ಅನುದಾನ ರೂ. 160.88 ಕೋಟಿಗಳನ್ನು ಪ್ರಾರಂಭಿಸಲಾಗಿರುವ 20 ಯೋಜನೆಗಳಿಗೆ ಬಳಸಿಕೊಳ್ಳಲು ಸೂಚಿಸಿದೆ. ಈ ಹಿನ್ನೆಲೆಯಲ್ಲಿ, ಪ್ರಾರಂಭಿಸದೇ ಇರುವ 22 ಯೋಜನೆಗಳನ್ನು ಕೈಬಿಟ್ಟಲ್ಲಿ ಸುಮಾರು 96 ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ 14,925 ಫಲಾನುಭವಿಗಳು ಪಕ್ಕಾ ಮನೆಗಳಿಂದ ವಂಚಿತರಾಗುತ್ತಾರೆಂದು

ಮನಗಂಡು ಪ್ರಾರಂಭಿಸದೇ ಇರುವ 22 ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುದಾನ ರೂ. 418.01 ಕೋಟಿಗಳನ್ನು ನೀಡಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಸದರಿ 22 ಯೋಜನೆಗಳಲ್ಲಿ ಚಿಂತಾಮಣಿಯು ಸೇರಿರುತ್ತದೆ. ಕಾಮಗಾರಿಗೆ ಅನುಮೋದನೆ ನೀಡಿದ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದು.

ಈ) ರಾಜೀವ್ ಅವಾಜ್ ಯೋಜನೆಯಡಿ ಅನುಮೋದನೆಯಾಗಿರುವ 230 ಮನೆಗಳ ನಿರ್ಮಾಣ ಮಾಡಲು ಶ್ರೀ ಜಿ. ಚಂದ್ರೇಗೌಡ, ಕ್ಲಾಸ್–1 ಗುತ್ತಿಗೆದಾರರು, ನಂ.10/ಬಿ, ಸತ್ಯನಾರಾಯಣ ನಿಲಯ, ಕೆ.ಹೆಚ್.ಬಿ. ಕಾಲೋನಿ, ಪುಟ್ಟೇನಹಳ್ಳಿ, ಯಲಹಂಕ, ಬೆಂಗಳೂರು–64 ರವರಿಗೆ ನೀಡಬೇಕಾಗಿರುತ್ತದೆ.

ಗುತ್ತಿಗೆ ಮೊತ್ತ ರೂ. 972.30 ಲಕ್ಷಗಳು

ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವುದು

1462(2410); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಇತರೆ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಅಧಿಕಾರಿಗಳು ಯಾವ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಅವರ ಪದನಾಮ ಹಾಗೂ ಎಂದಿನಿಂದ ಸೇವೆಯಲ್ಲಿದ್ದಾರೆ ಎಂಬ ಪೂರ್ಣ ವಿವರ ನೀಡುವುದು?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ವಿವರವನ್ನು ಅನುಬಂದಿಸಿದೆ.